

# ಎಂಥ ಧಗೆಯನ್ನೂ ತಣಿಸಬಲ್ಲ ತಂಗಾಳಿಯ ಹೆಸರು

# ಗಾಲಿಬ್

ಸಂಕಷ್ಟಗಳ ನಡುವೆಯೂ ಜೀವಪ್ರೀತಿಯನ್ನು ಉಳಿಸಿಕೊಂಡು, ಕಾವ್ಯದ ಮೂಲಕವೇ ಬದುಕಿನ ಪರಮಸೋಪಾನವನ್ನು ಕಂಡುಕೊಂಡ ಮಹಾಕವಿ ಗಾಲಿಬ್ (ಡಿ. 27, 1797 – ಫೆ. 15, 1869). ಆತನ ಕಾವ್ಯ ಭಾಷೆ ಮತ್ತು ಬೌದ್ಧಿಕತೆಯ ಪ್ರದರ್ಶನವಲ್ಲ; ಅದು ಅಂತರಂಗದ ಜೀವನಪ್ರೀತಿಯೇ ಕಾವ್ಯದ ರೂಪು ತಳೆದ ಜಾದು. ಗಾಲಿಬ್ ಹಾಗೂ ಆತನ ಕಾವ್ಯದ ನೆನಪು ಈ ಸುಡು ಬೇಸಗೆಯ ಸಂದರ್ಭವನ್ನು ಸಹ್ಯವಾಗಿಸಬಲ್ಲದು; ಕೊರೊನಾ ಸೋಂಕಿನ ಭೀತಿ ಸೃಷ್ಟಿಸಿರುವ ಕಡ್ಡಾಯ ಮನೆವಾಸದ ಸನ್ನಿವೇಶವನ್ನು ಹಗುರವಾಗಿಸಬಲ್ಲದು.

■ ಪ್ರೊ. ಚಂದ್ರಶೇಖರ ಹೆಗಡೆ

ತಂಗಾಳಿಯ ಮಬ್ಬು ನಸುಕಿನ ಅಮೃತಗಳಿಗೆಗೆ ಯಾವುದಾದರೊಂದು ಕಾವ್ಯಾರಾಧನೆಯ ಘಮಲು ಸೇರಿದರೆ ಅದೆಷ್ಟು ಚೆನ್ನ! ಸ್ವರ್ಗಕ್ಕೆ ಕಿಚ್ಚು ಹಚ್ಚುವುದೊಂದೇ ಬಾಕಿ. ಹಾಗೆಂದುಕೊಂಡು ದೀಪ ಬೆಳಗಿಸಿ ಗ್ರಂಥಾಲಯದಲ್ಲೊಮ್ಮೆ ಇಣುಕಿ ಹುಡುಕಿದೆ. ಮಿರ್ಜಾ ಗಾಲಿಬನ ಕುರಿತಾದ ಪುಸ್ತಕವೊಂದು ಕೈಗೆ ದಕ್ಕಿತು. ಇನ್ನೇನು ಬೇಕು? ಬೆಳಗಿನ ತಂಗಾಳಿಗೆ ಸುಗಂಧವಾಗಿ ಸುಳಿದ ಮಿರ್ಜಾ ಗಾಲಿಬ್‌ನನ್ನು ಆಸ್ವಾದಿಸುವುದೆಂದರೆ, ಜಗದ ಕಾವ್ಯನಶೆಯನ್ನೆಲ್ಲಾ ಎದೆಯೊಳಗಿಳಿಸಿಕೊಂಡಂತೆ! ಆತ ಕೇಳುತ್ತಾನೆ:

ಗಾಲಿಬ್ ಶರಾಬ್ ಪೀನೆ ದೇ ಮಸಜಿದ್ ಮೆ ಬೈಠಕರ್<br>
ಯ ವೋ ಜಗಾ ಬಥಾ ಜಹಾ ಖುದಾ ನಹೀ<br>
(ಮಸೀದಿಯಲ್ಲಿ ಕುಳಿತು ಮದಿರೆ ಕುಡಿಯಲು ಬಿಡು<br>
ಇಲ್ಲಾ ದೇವನಿಲ್ಲದ ಸ್ಥಳವನ್ನಾದರೂ ತೋರು)

ನಾವೇ ರೂಪಿಸಿಕೊಂಡ ಸಾಂಸ್ಥಿಕ ವ್ಯವಸ್ಥೆ, ಧರ್ಮ, ಸಂಪ್ರದಾಯ, ನಂಬಿಕೆಗಳು ಗಾಲಿಬ್ ಎತ್ತುವ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಸೋಲುವುದನ್ನು ಕಾಣುತ್ತೇವೆ. ಇದನ್ನೇ ಅಲ್ಲವೇ, ಕನಕದಾಸರ ಬಾಳೆಹಣ್ಣಿನ ರೂಪಕವೂ ಮತ್ತೊಂದು ಬಗೆಯಲ್ಲಿ ಜಗತ್ತನ್ನು ಪ್ರಶ್ನಿಸುತ್ತಿರುವುದು. ಶಬ್ದ ರೂಪಕಗಳಷ್ಟೇ ವಿಭಿನ್ನವಾದರೂ ಪ್ರತಿಪಾದಿಸುತ್ತಿರುವ ಇಬ್ಬರ ತಾತ್ವಿಕತೆಯ ದರ್ಶನವೂ ಒಂದೇ. ಕವಿಯೊಬ್ಬ ಹಾಡುತ್ತಾನೆ, 'ದೇವನ ಮನೆಯಿದು ಈ ಜಗವೆಲ್ಲ, ಬಾಡಿಗೆದಾರರು ನಾವುಗಳೆಲ್ಲ'. ಈ ಸತ್ಯಶೋಧನೆಯಿಂದ ಸಮಾಜವನ್ನು ಜಾಗೃತಗೊಳಿಸುವುದು ಗಾಲಿಬ್‌ನ ಕವಿತೆಯ ಗುರಿಗಳಲ್ಲೊಂದಾಗಿತ್ತು.

ಗಾಲಿಬನ ಕವಿತೆಗಳೆಂದರೆ ನಿಶಾಂತವಾಗಿ ಹರಿಯುವ ನದಿಯ ಮಂಜುಳಗಾನ; ಏಕಾಂತದ ತಪದಲಿದ್ದು ಆಚರಿಸುವ ಮೃದು ಮಧುರ ಧ್ಯಾನ; ಶಾಂತವಾಗಿ